ಸಂಜೆವಾಣಿ

1982 ರಿಂದ ನಿಮ್ಮ ಸೇವೆಯಲ್ಲಿ

**Thursday, January 20th, 2011**



ಡಾ. ಸಂದೀಪ್‌ಶಾಸ್ತ್ರಿ ಅವರ ಕರ್ನಾಟಕ ಪಾಲಿಟಿಕ್ಸ್ ಪುಸ್ತಕವನ್ನು ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಇಂದು ನಗರದ ಜೈನ್ ವಿಶ್ವವಿದ್ಯಾಲಯದಲ್ಲಿ ಬಿಡುಗಡೆ ಮಾಡಿದರು.

# ಕರ್ನಾಟಕದ ರಾಜಕಾರಣದಿಂದ ಪುಳಕ!

ಬೆಂಗಳೂರು, ಜ. ೨೦- ಕರ್ನಾಟಕ ರಾಜ್ಯ ರಾಜಕಾರಣದಿಂದ ತಾವು ಹೆಚ್ಚು ಪುಳಕಿತಕ್ಕೊಳಗಾಗಿರುವುದಾಗಿ ರಾಜ್ಯಪಾಲ ಹಂಸ ರಾಜ್ ಭಾರದ್ವಾಜ್ ಇಂದಿಲ್ಲಿ ಅಭಿಪ್ರಾಯಪಟ್ಟರು.

ಮಹಾವೀರ್ ಜೈನ್ ಕಾಲೇಜಿನಲ್ಲಿಂದು ಜೈನ್‌ನಿಧಿ ನಿಕಟಪೂರ್ವ ಉಪಕುಲಪತಿ ಡಾ.ಸಂದೀಪ್ ಶಾಸ್ತ್ರಿಯವರ ಕರ್ನಾಟಕ ರಾಜಕೀಯ ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕರ್ನಾಟಕ ರಾಜ್ಯ ಉತ್ತಮ ಮುಖ್ಯ ಮುಖ್ಯಮಂತ್ರಿಗಳನ್ನೆ ನೀಡಿರುವ ರಾಜ್ಯವಾಗಿದ್ದು, ವಿಶ್ವೇಶ್ವರಯ್ಯ ಅವರಂತಹ ರಾಷ್ಟ್ರೀಯ ವ್ಯಕ್ತಿಗಳನ್ನು ಕೊಡುಗೆಯಾಗಿ ನೀಡಿದೆಯೆಂದರು.

ತಾವು ಭೇಟಿ ನೀಡಿದ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯ ತಮಗೆ ಹೆಚ್ಚು ಪ್ರೇರಣೆ ನೀಡಿದ್ದು, ಇಲ್ಲಿ ಟಾಪ್‌ಕ್ಲಾಸ್ ಜನ, ಕಟ್ಟಡಗಳು, ಸ್ಮಾರಕಗಳು ತಮಗೆ ಖುಷಿ ಕೊಟ್ಟಿವೆಯೆಂದ ಅವರು, ಮಾಜಿ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪ, ದೇವರಾಜ ಅರಸ್, ಬಿ.ಡಿ.ಜಟ್ಟಿ ಅವರಿಂದ ತಾವು ವಕೀಲರಿದ್ದಾಗಲೇ ಸಾಕಷ್ಟು ಪಾಠ ಕಲಿತಿರುವುದಾಗಿ ಹೇಳಿದರು. ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಪ್ರಸ್ತುತ ರಾಜಕೀಯದ ಕಡೆ ಗಮನ ನೀಡದೆ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ ಭವಿಷ್ಯದಲ್ಲಿ ಉತ್ತಮ ಸತ್ಪ್ರಜೆಗಳಾಗುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಅವರು ಕಾಲೇಜುಗಳು ಸಾಮಾನ್ಯ ಜ್ಞಾನ ನೀಡಿದರೆ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಬೆಳೆಯಲು ಸಾಧ್ಯವಿಲ್ಲ. ಸ್ಪರ್ಧಾತ್ಮಕ ಜಗತ್ತನ್ನು ಎದುರಿಸುವ ಎಲ್ಲ ರೀತಿಯ ಶಿಕ್ಷಣವನ್ನು ನೀಡಲು ಜೈನ್ ಸಮುದಾಯ ಮುಂದಾಗಬೇಕೆಂದರು.

ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿ, ಯಾದಗಿರಿ, ಗುಲ್ಬರ್ಗಾ ರಾಜ್ಯಗಳು ವಿವಾದಲ್ಲಿದ್ದು ಹೆಸರು ಗಳಿಸಿದರೆ, ಮೈಸೂರು ಸಾಂಸ್ಕೃತಿಕ ನಗರಿಯಾಗಿ ಹೆಸರು ಗಳಿಸಿದೆ ಎಂದು ರಾಜ್ಯವನ್ನು ಶ್ಲಾಘಿಸಿದರು.

ಕರ್ನಾಟಕದಿಂದ ತುಂಬಾ ಪಾಠ ಕಲಿತಿದ್ದು, ಇನ್ನು ಕಲಿಯುವುದು ಬಹಳಷ್ಟಿದೆ ಎಂದ ಅವರು, ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಮುಂದೆ ರಾಜಕೀಯ ಕ್ಷೇತ್ರಕ್ಕೆ ಬಂದು ಜನಸೇವೆ ಮಾಡಲಿ ಎಂದು ಹಾರೈಸಿದರು.

ಸಮಾರಂಭದಲ್ಲಿ ಕುಲಪತಿ ಆರ್.ಚಂದ್ರಾಜೈನ್, ಉಪಕುಲಪತಿ ಡಾ.ಎಂ.ಸುಂದರ್‌ರಾಜನ್, ರಿಜಿಸ್ಟರ್ ಪ್ರೊ.ಎನ್.ವಿ.ಹೆಚ್.ಕೃಷ್ಣನ್ ಉಪಸ್ಥಿತರಿದ್ದರು.